

# ಚತುರ ಬೇಟೆಗಾರ ಜೇಡ

**ಚಾಕಚಕ್ಯತೆಯಿಂದ ಬೇಟೆಯಾಡುವ ಪರಿಗೆ ಹೆಸರಾಗಿರುವ ಬೇಟೆಗಾರ ಜೇಡದ ಬದುಕಿನ ರೀತಿ ಅಚ್ಚರಿ ತರಿಸುವಂತಿದೆ.**

**■ ಪ್ರಕಾಶ ಎಸ್. ಮನ್ನಂಗಿ**

ಬೆಳ್ಳಂಬೆಳಿಗ್ಗೆ ಹನುಮನ ಮಟ್ಟಿ ಕೃಷಿ ವಿಶ್ವವಿದ್ಯಾಲಯದ ಹಿಂದಿನ ಕುರುಚಲು ಕಾಡಿನಲ್ಲಿ ಸಾಗಿದ್ದೆ. ಸೂರ್ಯ ಮರಗಳ ಸಂದಿನಿಂದ ಇಣುಕಿ ನೋಡುತ್ತಿದ್ದ ಆ ಹೊತ್ತು, ಅಲ್ಲೇ ಸಮೀಪದಲ್ಲಿ ಕಲ್ಲಿನ ಸಂದಿಯಿಂದ ಏನೋ ಸರಿದಂತಾಯಿತು. ಗಮನಿಸಿ ನೋಡಿದರೆ, ಅದೊಂದು ಪುಟ್ಟ ಜೀವಿ, ಜೇಡ.

ಹೊಟ್ಟೆಗೆ ಏನನ್ನೋ ಅಂಟಿಸಿಕೊಂಡಂತೆ ಸರಬರ ಓಡಾಡುತ್ತಿತ್ತು. ಅದು ಸಾಮಾನ್ಯ ಜೇಡದಂತಿರಲಿಲ್ಲ. ಹೀಗಾಗಿ ಅವುಗಳ ಫೋಟೊ ಕ್ಲಿಕ್ಕಿಸಿ ಮರಳಿ ಬಂದ ನಾನು, ಅದರ ಹಿನ್ನೆಲೆ ಕೆದಕುವ ಕೆಲಸ ಶುರುವಿಟ್ಟುಕೊಂಡೆ.

ಇದರ ಹೆಸರು ಬೇಟೆಗಾರ ಜೇಡ. ಸಂಧಿಪದಿ ವಂಶದ ಸ್ಪರ್ಯಾಸಿಡೇ ಕುಟುಂಬದ ಅರ್ಯಾಕ್ನಿಡಾ ವರ್ಗದಲ್ಲಿ ಸುಮಾರು ನಲವತ್ತು ಸಾವಿರ ಜಾತಿಯ ಜೇಡಗಳಿವೆ. ಇದರಲ್ಲಿ ಅತಿ ವಿಲಕ್ಷಣ ಜೇಡ ಎಂದು ಕರೆಸಿಕೊಂಡಿರುವುದೇ ಈ ಬೇಟೆಗಾರ ಜೇಡ. ಇದಕ್ಕೆ ಇಂಗ್ಲಿಷ್‌ನಲ್ಲಿ 'ಹಂಟ್ಸಮನ್ ಸ್ಪೈಡರ್' ಎಂದು ಕರೆಯುತ್ತಾರೆ. ವೇಗದ ಮತ್ತು ಚಾಕಚಕ್ಯತೆಯ ಬೇಟೆಗೆ ಇದು ಹೆಸರುವಾಸಿ. ಬೇಟೆಗಾರ ಜೇಡದಲ್ಲಿಯೂ 13 ಜಾತಿಗಳು ಮತ್ತು 94 ಪ್ರಭೇದಗಳಿವೆ.

ಏಷ್ಯಾ, ಆಫ್ರಿಕಾ, ಅಮೆರಿಕ ಮತ್ತು ಆಸ್ಟ್ರೇಲಿಯಾದಲ್ಲಿ ಹೆಚ್ಚಾಗಿ ಕಂಡುಬರುವ ಇವು – ಕಲ್ಲು, ಮರದ ತೊಗಟೆಯ ಕೆಳಗೆ ವಾಸಿಸುತ್ತವೆ. ಕಲ್ಲುಗಳ ಕೆಳಗಿನ ಸಂದಿಯಲ್ಲಿ ವಾಸಿಸಬೇಕಿರುವುದರಿಂದ ಅದಕ್ಕೆ ತಕ್ಕಂತೆ ದೇಹವೂ ಚಪ್ಪಟೆಯಾಗಿ ರೂಪುಗೊಂಡಿರುವಂತಿದೆ.

ಬೇಟೆಗಾರ ಜೇಡಕ್ಕೆ ಎಂಟು ಕಣ್ಣುಗಳಿರುತ್ತವೆ. ತಲಾ ನಾಲ್ಕರಂತೆ ಮುಂಭಾಗದ ಎರಡು ಸಾಲುಗಳಲ್ಲಿ ಕಣ್ಣುಗಳು ರೂಪುಗೊಂಡಿವೆ. ಕಣ್ಣುಗಳು ಗ್ರಹಿಸುವ ಮಂದ ಬೆಳಕಿನಿಂದ ಬೇಟೆಯ ಕಾರ್ಯತಂತ್ರ ರೂಪಿಸುತ್ತದೆ. ಬೇಟೆಗಾರ ಜೇಡಗಳನ್ನು ಅವುಗಳ ಕಾಲುಗಳಿಂದ ಗುರುತಿಸಬಹುದು. ಏಡಿಯ ಕಾಲಿನಂತೆ ಅವು ಮುಂಭಾಗದಲ್ಲಿ ತಿರುಚಿರುತ್ತವೆ. ಇವುಗಳ ಮೇಲ್ಭಾಗದಲ್ಲಿ ಅಸ್ಪಷ್ಟ ಕಂದು ಇಲ್ಲವೇ ಬೂದು ಬಣ್ಣದ ಛಾಯೆಯಿರುತ್ತದೆ. ಕಾಲುಗಳ ಮೇಲೆ ಸೂಕ್ಷ್ಮ ಮುಳ್ಳುಗಳಿದ್ದರೆ, ಉಳಿದ ಭಾಗ ಮೃದುವಾದ ತುಪ್ಪಳ ಹೊಂದಿರುತ್ತದೆ. ಈ ಮುಳ್ಳುಗಳು ಸಂವೇದನಾಶೀಲವಾಗಿರುತ್ತವೆ. ದೇಹದ ಮೇಲೆ ಕಪ್ಪು, ಬಿಳಿಯ ಪಟ್ಟೆಗಳಿವೆ.

ಪ್ರೌಢ ಬೇಟೆಗಾರ ಜೇಡಗಳು ಬಲೆ ನೇಯುವುದಿಲ್ಲ. ಹೆಚ್ಚಾಗಿ ಜಿರಲೆಗಳು, ಕೀಟಗಳನ್ನು ಭಕ್ಷಿಸುತ್ತವೆ. ಇವುಗಳ ಬೇಟೆಯ ಪರಿಯೂ ವಿಶಿಷ್ಟ. ವಿಷವನ್ನು ಚುಚ್ಚಿ ಬೇಟೆಯನ್ನು ನಿಷ್ಕ್ರಿಯಗೊಳಿಸಿದ ನಂತರ ಸೇವಿಸುತ್ತದೆ.

## ಗಂಡು ಜೇಡದ ಉದರ ಕಂಪನ

ಸಮೀಪದಲ್ಲಿ ತನ್ನ ಪ್ರಭೇದದ ಹೆಣ್ಣಿರುವ ಸೂಚನೆ ಗಂಡು ಜೇಡಕ್ಕೆ ಫೆರೋಮೋನ ಎಂಬ ರಾಸಾಯನಿಕದ ವಾಸನೆ ಮೂಲಕ ಸಿಗುತ್ತದೆ. ಆ ಸೂಚನೆ ಸಿಗುತ್ತಿದ್ದಂತೆ ವಿಲಕ್ಷಣ ಶಬ್ದ ಹೊರಡಿಸುತ್ತದೆ ಗಂಡು. ಕತ್ತಲೆಯಲ್ಲಿ ಗಡಿಯಾರದ ಟಿಕ್ ಟಿಕ್ ಶಬ್ದವನ್ನು ಅದು ಹೋಲುತ್ತದೆ. ನಂತರ ನೃತ್ಯ ಮಾಡುತ್ತ ತನ್ನ ಉದರದಿಂದ ಕಂಪನಗಳನ್ನು ಹೊರಡಿಸುತ್ತದೆ. ಈ ಕಂಪನ ಹೆಣ್ಣಿನತ್ತ ಹೊರಡುತ್ತಿದ್ದಂತೆ ಮಿಲನದ ಆಸಕ್ತಿಯಿದ್ದರೆ ಗಂಡಿನತ್ತ ಅದು ನುಗ್ಗುತ್ತದೆ. ಮಿಲನದ ನಂತರ ಹೆಣ್ಣು ಅಗಲ, ಅಂಡಾಕಾರದ ರೇಷ್ಮೆಯಂತಿರುವ ಅಂಡಕೋಶವನ್ನು ಉತ್ಪಾದಿಸುತ್ತದೆ. ಇದರಲ್ಲಿ ಸುಮಾರು 200ರವರೆಗೆ ತತ್ತಿಗಳಿರುತ್ತವೆ. ಈ ಅಂಡಕೋಶವನ್ನು ತನ್ನ ಎದೆಗವುಚಿಕೊಂಡು ಕಾಪಾಡುತ್ತದೆ ತಾಯಿ ಜೇಡ. ಈ ಸಮಯದಲ್ಲಿ ಯಾರೇ ಹತ್ತಿರ ಬಂದರೂ ಕೋಪದಿಂದ ಏರಿಹೋಗುತ್ತದೆ.

ಅಂಡಕೋಶದಿಂದ ಮರಿಗಳು ಹೊರಬಂದ ನಂತರವೂ ಮರಿಗಳೊಂದಿಗೆ ಹಲವು ವಾರ ತಾಯಿ ಇರುತ್ತದೆ. ಮತ್ತೆ ಮತ್ತೆ ಪೊರೆ ಕಳಚಿಕೊಂಡು ಪ್ರೌಢ ಜೇಡ ರೂಪುಗೊಳ್ಳುತ್ತದೆ. ಅಷ್ಟೇನೂ ಅಪಾಯಕಾರಿಯಲ್ಲದ ಈ ಜೇಡ, ಕೀಟಗಳನ್ನು ಕಬಳಿಸಿ ರೈತರಿಗೆ ನೆರವಾಗುತ್ತದೆ. ಆದರೆ ಮನುಷ್ಯರಿಗೆ ಇದರ ಕಡಿತದಿಂದ ವಾಂತಿ, ನೆಗಡಿ, ತಲೆನೋವು ಬರಬಹುದು. ಆದ್ದರಿಂದ ಅಂಡಕೋಶವಿರುವಾಗ ಹತ್ತಿರ ಸುಳಿಯದಿರುವುದೇ ವಾಸಿ.

ಪ್ರತಿಕ್ರಿಯಿಸಿ: feedback@sudha.co.in